# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 22/2021**

**ದೋ.ಸಾ. : 5 ಪ್ರಾ.ಸಾ. : 9**

| | | |
|---|---|---|
| ಸಾಕ್ಷಿಯ ಹೆಸರು | : | ಆಸಿಫ್ ಅಲಿ ಅಬ್ದುಲ್ ಗಫಾರ್ |
| ತಂದೆಯ ಹೆಸರು | : | ಅಬ್ದುಲ್ ಗಫಾರ್ |
| ವಯಸ್ಸು | : | 50 ವರ್ಷ |
| ಕೆಲಸ | : | ಚಾಲಕ |
| ವಾಸ | : | ಜನತಾ ಕಾಲೋನಿ, ಚಂದಾವರ, ತಾಃ ಹೊನ್ನಾವರ |

**ದಿನಾಂಕಃ 19-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. ದಿ. 03-05-2021 ರಂದು ಹೊನ್ನಾವರ ಪೊಲೀಸರು ಚಾಸಾ-14 ರವರ ಮನೆಯ ಮುಂದೆ ಅಬುತಾಲಿಬ್ ರವರ ಕೊಲೆಯಾಗಿದೆ ಎಂದು ನನ್ನನ್ನು ಪಂಚನಾಮೆಗೆ ಬರಲು ನೋಟಿಸ್ ನೀಡಿದ್ದರು. ಅದರಂತೆ ನಾನು ಆ ದಿನ ಸಂಜೆ 4.15 ಗಂಟೆಗೆ ಚಾಸಾ-14 ರವರ ಮನೆಯ ಮುಂದಿನ ರಸ್ತೆಗೆ ಹೋದಾಗ, ಅಲ್ಲಿ ಚಾಸಾ-13 ಹೀನಾ ಕೌಸರ್ ಇಸ್ಮಾಯಿಲ್ ಮುಲ್ಲಾ ರವರು ಹಾಜರಿದ್ದು, ಅಬುತಾಲಿಬ್ ರವರ ಕೊಲೆಯಾಗಿರುವ ಸ್ಥಳ ತೋರಿಸಿರುತ್ತಾರೆ. ಆ ಸಮಯದಲ್ಲಿ ಚಾಸಾ-4 ಸಲೀಂ ರವರೂ ಸಹ ಹಾಜರಿದ್ದು, ಅಲ್ಲಿ ಪೊಲೀಸರು ಸ್ಥಳ ಪರಿಶೀಲಿಸಿ, ನನ್ನ ಸಮಕ್ಷಮ ಪಂಚನಾಮೆ ಮಾಡಿ, ನಮ್ಮ ಸಹಿಗಳನ್ನು ಪಡೆದುಕೊಂಡರು. ಸದರಿ ಪಂಚನಾಮೆ ಮಾಡಿದ ಸ್ಥಳವು ಮಣ್ಣಿನ ರಸ್ತೆಯಾಗಿರುತ್ತದೆ. ಸದರಿ ಸ್ಥಳದಲ್ಲಿ ಚಾಸಾ-13 ರವರು ರಕ್ತ ಬಿದ್ದ ಸ್ಥಳದಲ್ಲಿ ರಕ್ತವನ್ನು ತೋರಿಸಿದ್ದು, ಪೊಲೀಸರು ನಮ್ಮ ಸಮಕ್ಷಮ ರಕ್ತ ತಾಗಿದ ಮಣ್ಣನ್ನು ಹಾಗೂ ರಕ್ತ ತಾಗದೇ ಇರುವ ಮಣ್ಣನ್ನು ಪ್ರತ್ಯೇಕ ಬಿಳಿ ಪೇಪರಿನಲ್ಲಿ ಸಂಗ್ರಹಿಸಿ, ಅದನ್ನು ಬಿಳಿ ಬಟ್ಟೆಯಲ್ಲಿ ಸುತ್ತಿ ಜಪ್ತುಪಡಿಸಿಕೊಂಡು, ನಮ್ಮ ಸಹಿ ಪಡೆದುಕೊಂಡರು. ಸದರಿ ಸ್ಥಳದಲ್ಲಿ ಅಬುತಾಲಿಬ್ ರವರ ಎಡಗಾಲಿನ ಒಂದು ಪ್ಯಾರಗಾನ್ ಚಪ್ಪಲಿ, ಒಂದು ಮುರಿದ ಕನ್ನಡಕ, ಒಂದು ಬಡಿಗೆ ಗಳು ಸಿಕ್ಕಿದ್ದು, ಅವುಗಳನ್ನೂ ಸಹ ಪೊಲೀಸರು ಬಿಳಿ ಬಟ್ಟೆಗಳಲ್ಲಿ ಸುತ್ತಿ ಜಪ್ತುಪಡಿಸಿಕೊಂಡಿರುತ್ತಾರೆ ಹಾಗೂ ನಮ್ಮ ಸಹಿಯನ್ನು ಪಡೆದುಕೊಂಡಿರುತ್ತಾರೆ ಮತ್ತು

ಫೋಟೊ ಹಾಗೂ ನಕಾಶೆ ತೆಗೆದಿರುತ್ತಾರೆ. ಪಂಚನಾಮೆಯನ್ನು ಸಂಜೆ 4.15 ರಿಂದ 5.45 ರವರೆಗೆ ಮಾಡಲಾಯಿತು. ಪೊಲೀಸರು ನೀಡಿದ ನೋಟಿಸನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ–30 ಎಂದು, ಸಾಕ್ಷಿಯ ಸಹಿಯನ್ನು ನಿಪಿ–30(ಎ) ಎಂದು ಗುರುತಿಸಲಾಯಿತು. ಅದೇ ರೀತಿ, ಸಾಕ್ಷಿಯು ಪಂಚನಾಮೆ, ನಕಾಶೆ ಮತ್ತು ಫೋಟೊಗಳನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ–31 ಎಂದು, ನಕಾಶೆಯನ್ನು ನಿಪಿ–32 ಎಂದು, ಅವುಗಳಲ್ಲಿರುವ ಸಹಿಗಳನ್ನು ನಿಪಿ–31(ಎ) ಮತ್ತು ನಿಪಿ–32(ಎ) ಎಂದು ಮತ್ತು ಎರಡು ಫೋಟೊಗಳನ್ನು ನಿಪಿ–33 ಮತ್ತು ನಿಪಿ–34 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಪಿ.ಪಿ. ರವರು ಎರಡು ಸೀಲಾದ ವಸ್ತುವನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲು ಅನುಮತಿ ಕೋರಿದ್ದರು, ಸದ್ರಿ ವಸ್ತುಗಳ ಮೇಲೆ ಇದ್ದ ಸೀಲು ಸುಸ್ಥಿತಿಯಲ್ಲಿ ಇರುವುದರಿಂದ ಪಿ.ಪಿ. ರವರಿಗೆ ಅದನ್ನು ತೆರೆಯಲು ಅನುಮತಿಸಲಾಯಿತು.)**

2. ರಕ್ತ ತಾಗಿದ ಮಣ್ಣನ್ನು ಎಂ.ಓ–12 ಎಂದು, ಅದನ್ನು ಸುತ್ತಿದ ಬಿಳಿ ಬಟ್ಟೆಯ ಚೀಲವನ್ನು ಎಂ.ಓ–12/1 ಎಂದು, ಅದರ ಮೇಲೆ ಅಂಟಿಸಿರುವ ಚೀಟಿಯಲ್ಲಿಯ ಸಹಿಯನ್ನು ಎಂ.ಓ–12/1(ಎ) ಎಂದು, ರಕ್ತ ತಾಗದೇ ಇರುವ ಮಣ್ಣನ್ನು ಎಂ.ಓ–13 ಎಂದು, ಅದನ್ನು ಸುತ್ತಿದ ಬಿಳಿ ಬಟ್ಟೆಯ ಚೀಲವನ್ನು ಎಂ.ಓ–13/1 ಎಂದು, ಅದರ ಮೇಲೆ ಅಂಟಿಸಿರುವ ಚೀಟಿಯಲ್ಲಿಯ ಸಹಿಯನ್ನು ಎಂ.ಓ–13/1(ಎ) ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದಿರುವ ಎಂ.ಓ–5 ಕನ್ನಡಕವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಸುತ್ತಿದ ಬಿಳಿ ಬಟ್ಟೆಯ ಚೀಲವನ್ನು ಎಂ.ಓ–5/1 ಎಂದು, ಅದರ ಮೇಲೆ ಅಂಟಿಸಿರುವ ಚೀಟಿಯಲ್ಲಿಯ ಸಹಿಯನ್ನು ಎಂ.ಓ–5/1(ಎ) ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದಿರುವ ಎಂ.ಓ–6 ಚಪ್ಪಲಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಸುತ್ತಿದ ಬಿಳಿ ಬಟ್ಟೆಯ ಚೀಲವನ್ನು ಎಂ.ಓ–6/1 ಎಂದು, ಅದರ ಮೇಲೆ ಅಂಟಿಸಿರುವ ಚೀಟಿಯಲ್ಲಿಯ ಸಹಿಯನ್ನು ಎಂ.ಓ–6/1(ಎ) ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದಿರುವ ಎಂ.ಓ–7 ಬಡಿಗೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಸುತ್ತಿದ ಬಿಳಿ ಬಟ್ಟೆಯ ಚೀಲವನ್ನು ಎಂ.ಓ–7/1 ಎಂದು, ಅದರ ಮೇಲೆ ಅಂಟಿಸಿರುವ ಚೀಟಿಯಲ್ಲಿಯ ಸಹಿಯನ್ನು ಎಂ.ಓ–7/1(ಎ) ಎಂದು ಗುರುತಿಸಲಾಯಿತು.

3. ದಿ.04-05-2021 ರಂದು ಸಿ.ಪಿ.ಐ ಕಚೇರಿಗೆ ಪಂಚನಾಮೆಗೆ ಬರುವಂತೆ ಹೊನ್ನಾವರ ಪೊಲೀಸರು ನನಗೆ ನೋಟಿಸ್ ನೀಡಿದ್ದು, ಅದರಂತೆ ನಾನು ಹಾಗೂ ಚಾಸಾ-8 ರವರು ಅದೇ ದಿನ ಸಂಜೆ 4.00 ಗಂಟೆಗೆ ಹೊನ್ನಾವರದ ಸಿ.ಪಿ.ಐ ಕಚೇರಿಗೆ ಹೋಗಿರುತ್ತೇವೆ. ಅಲ್ಲಿ ಪೊಲೀಸ್ ಸಿಬ್ಬಂದಿಯಾದ ಚಾಸಾ-35/ರಮಾನಂದ ನಾಯ್ಕ ರವರು ಮೃತ ಅಬುತಾಲಿಬ್ ರವರ ಮರಣೋತ್ತರ ಪರೀಕ್ಷೆಯ ವೇಳೆ ವೈದ್ಯರು ಸಂಗ್ರಹಿಸಿದ ವಸ್ತುಗಳಾದ ಮೃತನ ಲುಂಗಿ, ಶರ್ಟ್, ನಿಕ್ಕರ್ ಇವುಗಳನ್ನು ತಂದು ಹಾಜರುಪಡಿಸಿರುತ್ತಾರೆ. ಸದರಿ ವಸ್ತುಗಳನ್ನು ಪೊಲೀಸರು ನಮ್ಮ ಸಮಕ್ಷಮ ಜಪ್ತುಪಡಿಸಿಕೊಂಡು ಪಂಚನಾಮೆ ಮಾಡಿ ನಮ್ಮ ಸಹಿಗಳನ್ನು ಪಡೆದುಕೊಂಡರು ಹಾಗೂ ಫೋಟೊ ತೆಗೆದರು. ಪೊಲೀಸರು ನೀಡಿದ ನೋಟಿಸನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-35 ಎಂದು, ಸಾಕ್ಷಿಯ ಸಹಿಯನ್ನು ನಿಪಿ-35(ಎ) ಎಂದು ಗುರುತಿಸಲಾಯಿತು. ಅದೇ ರೀತಿ, ಸಾಕ್ಷಿಯು ಪಂಚನಾಮೆ ಮತ್ತು ಮೂರು ಫೋಟೊಗಳನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ-36 ಎಂದು, ಸಾಕ್ಷಿಯ ಸಹಿಯನ್ನು ನಿಪಿ-36(ಎ) ಎಂದು ಮತ್ತು ಮೂರು ಫೋಟೊಗಳನ್ನು ನಿಪಿ-37 ರಿಂದ 39 ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದಿರುವ ಎಂ.ಓ.-8 ಲುಂಗಿಯನ್ನು ನೋಡಿ ಗುರುತಿಸಿದ್ದು, ಅದನ್ನು ಸುತ್ತಿದ ಬಿಳಿ ಬಟ್ಟೆಯ ಚೀಲವನ್ನು ಎಂ.ಓ-8/1 ಎಂದು, ಅದರ ಮೇಲೆ ಅಂಟಿಸಿರುವ ಚೀಟಿಯಲ್ಲಿಯ ಸಹಿಯನ್ನು ಎಂ.ಓ-8/1(ಎ) ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದಿರುವ ಎಂ.ಓ.-9 ಶರ್ಟನ್ನು ನೋಡಿ ಗುರುತಿಸಿದ್ದು, ಅದನ್ನು ಸುತ್ತಿದ ಬಿಳಿ ಬಟ್ಟೆಯ ಚೀಲವನ್ನು ಎಂ.ಓ-9/1 ಎಂದು, ಅದರ ಮೇಲೆ ಅಂಟಿಸಿರುವ ಚೀಟಿಯಲ್ಲಿಯ ಸಹಿಯನ್ನು ಎಂ.ಓ-9/1(ಎ) ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದಿರುವ ಎಂ.ಓ.-10 ನಿಕ್ಕರನ್ನು ನೋಡಿ ಗುರುತಿಸಿದ್ದು, ಅದನ್ನು ಸುತ್ತಿದ ಬಿಳಿ ಬಟ್ಟೆಯ ಚೀಲವನ್ನು ಎಂ.ಓ-10/1 ಎಂದು, ಅದರ ಮೇಲೆ ಅಂಟಿಸಿರುವ ಚೀಟಿಯಲ್ಲಿಯ ಸಹಿಯನ್ನು ಎಂ.ಓ-10/1(ಎ) ಎಂದು ಗುರುತಿಸಲಾಯಿತು.

4. ದಿ. 05-05-2021 ರಂದು ಹೊನ್ನಾವರ ಪೊಲೀಸರು ಪುನಃ ಪಂಚನಾಮೆಗೆ ಬರುವಂತೆ ನನಗೆ ನೋಟಿಸ್ ನೀಡಿದ್ದು, ಅದರಂತೆ ನಾನು ಪೊಲೀಸ್ ಠಾಣೆಗೆ ಹೋಗಿದ್ದು, ಅಲ್ಲಿ ಚಾಸಾ-8 ರವರೂ ಹಾಜರಿದ್ದರು. ಆ ಸಮಯದಲ್ಲಿ ಚಾಸಾ-10/ ಅಜರುದ್ದೀನ್ ರವರು ಆರೋಪಿಯು ಮೃತ ಅಬುತಾಲಿಬ್ ರವರನ್ನು ಕೊಲೆ ಮಾಡುವ ದೃಶ್ಯವನ್ನು ವೀಡಿಯೋ

ಮಾಡಿಕೊಂಡ ಮೊಬೈಲನ್ನು ಹಾಜರುಪಡಿಸಿದ್ದು, ಅದು ರೆಡ್ಮಿ ಕಂಪನಿಯ ಮೊಬೈಲು ಆಗಿರುತ್ತದೆ. ಸದರಿ ಮೊಬೈಲಿನಲ್ಲಿದ್ದ ದೃಶ್ಯಾವಳಿಯನ್ನು ಚಾಸಾ-10 ರವರು ತೋರಿಸಿದ್ದು, ಅದು 15 ಸೆಕೆಂಡುಗಳ ವೀಡಿಯೋ ಆಗಿದ್ದು, ಅದರಲ್ಲಿ ಆರೋಪಿಯು ಮೃತ ಅಬುತಾಲಿಬ್ ರವರಿಗೆ ಚಾಕುವಿನಿಂದ ಇರಿದ ದೃಶ್ಯವಿರುತ್ತದೆ. ನಂತರ ಪೊಲೀಸರು ಸದರಿ ವೀಡಿಯೋದ ಸ್ಕ್ರೀನ್ ಶಾಟ್ ಗಳನ್ನು ತೆಗೆದುಕೊಂಡರು ಮತ್ತು ಅವುಗಳನ್ನು ಸಿ.ಡಿ.ಗೆ ವರ್ಗಾಯಿಸಿ, ಸಿ.ಡಿ. ಮತ್ತು ಮೊಬೈಲನ್ನು ನಮ್ಮ ಸಮಕ್ಷಮ ಜಪ್ತುಪಡಿಸಿಕೊಂಡು, ಪಂಚನಾಮೆ ಮಾಡಿ, ನಮ್ಮ ಸಹಿ ಪಡೆದುಕೊಂಡರು ಹಾಗೂ ಫೋಟೋ ತೆಗೆದಿರುತ್ತಾರೆ. ಆಗ ಸಮಯ ಬೆಳಿಗ್ಗೆ 11.30 ಯಿಂದ 12.30 ಗಂಟೆಯಾಗಿರುತ್ತದೆ. ತನಗೆ ನೀಡಿದ ನೋಟಿಸನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-40 ಎಂದು, ಸಾಕ್ಷಿಯ ಸಹಿಯನ್ನು ನಿಪಿ-40(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಯು ಮೊಬೈಲು ಜಪ್ತುಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-15 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-15(ಬಿ) ಎಂದು ಗುರುತಿಸಲಾಯಿತು. ಫೋಟೊವನ್ನು ಈಗಾಗಲೇ ನಿಪಿ-16 ಎಂದು ಗುರುತಿಸಲಾಗಿದೆ. ಜಪ್ತುಪಂಚನಾಮೆಯ ಕಾಲಕ್ಕೆ ತೆಗೆದುಕೊಂಡ ವೀಡಿಯೋ ಸ್ಕ್ರೀನ್ ಶಾಟ್ ಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-18 ರಿಂದ 21 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-18(ಬಿ) ಯಿಂದ 21(ಬಿ) ಎಂದು ಗುರುತಿಸಲಾಯಿತು. ಸದರಿ ದಿನದಂದು ಜಪ್ತುಪಡಿಸಿಕೊಂಡ ಮೊಬೈಲನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಓ-11 ಎಂದು ಗುರುತಿಸಲಾಗಿದ್ದು, ಸದರಿ ಮೊಬೈಲಿನಲ್ಲಿದ್ದ ದೃಶ್ಯಾವಳಿಯನ್ನು ಈದಿನ ನ್ಯಾಯಾಲಯದಲ್ಲಿ ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

5. ಅದೇ ದಿನ, ನಾನು ಠಾಣೆಯಲ್ಲಿದ್ದಾಗ, ಮೃತನ ಭಾವಚಿತ್ರ ಜಪ್ತುಪಡಿಸುವ ಕುರಿತಂತೆ ಪಂಚನಾಮೆಗೆ ಹಾಜರಿರುವಂತೆ ಪೊಲೀಸರು ನನಗೆ ನೋಟಿಸ್ ನೀಡಿರುತ್ತಾರೆ. ಆ ಸಮಯದಲ್ಲಿ ಚಾಸಾ-8 ರವರೂ ಸಹ ಹಾಜರಿದ್ದು, ಚಾಸಾ-18/ಕಲೀಮುದ್ದೀನ್ ರವರು ಮೃತ ಅಬುತಾಲಿಬ್ ರವರ ಒಂದು ಭಾವಚಿತ್ರವನ್ನು ಹಾಜರುಪಡಿಸಿದ್ದು, ಅದನ್ನು ಪೊಲೀಸರು ಪೇಪರಿಗೆ ಅಂಟಿಸಿ, ಪಂಚನಾಮೆ ಮಾಡಿ, ಅವುಗಳಿಗೆ ನಮ್ಮ ಸಹಿಯನ್ನು ಪಡೆದುಕೊಂಡರು ಹಾಗೂ ಫೋಟೊ ತೆಗೆದರು. ಸದರಿ ಪಂಚನಾಮೆಯನ್ನು ಮಧ್ಯಾಹ್ನ 12.45 ರಿಂದ 1.30 ವರೆಗೆ ಮಾಡಿದರು. ತನಗೆ ನೀಡಿದ ನೋಟಿಸನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು

ನಿಪಿ–41 ಎಂದು, ಸಾಕ್ಷಿಯ ಸಹಿಯನ್ನು ನಿಪಿ–41(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–42 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–42(ಎ) ಎಂದು ಗುರುತಿಸಲಾಯಿತು. ಪಂಚನಾಮೆಯ ಸಮಯದಲ್ಲಿ ತೆಗೆದ ಫೋಟೊವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ–43 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಪಿ.ಪಿ. ರವರು ಒಂದು ಸೀಲಾದ ವಸ್ತುವನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲು ಅನುಮತಿ ಕೋರಿದ್ದರು, ಸದರಿ ವಸ್ತುವಿನ ಮೇಲಿದ್ದ ಸೀಲು ಸುಸ್ಥಿತಿಯಲ್ಲಿ ಇರುವುದರಿಂದ ಪಿ.ಪಿ. ರವರಿಗೆ ಅದನ್ನು ತೆರೆಯಲು ಅನುಮತಿಸಲಾಯಿತು.)**

ಚಾಸಾ–18 ರವರು ಹಾಜರುಪಡಿಸಿದ ಭಾವಚಿತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ–44 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–44(ಎ) ಎಂದು, ಅದರ ಲಕೋಟೆಯನ್ನು ನಿಪಿ–44/1 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–44/1(ಎ) ಎಂದು ಗುರುತಿಸಲಾಯಿತು.

6. ದಿ. 04–06–2021 ರಂದು ಹೊನ್ನಾವರದ ಪೊಲೀಸರು ಪುನಃ ನನ್ನನ್ನು ಹಾಗೂ ಚಾಸಾ–9/ಇಬ್ರಾಹಿಮ್ ರವರನ್ನು ಪಂಚನಾಮೆಗೆ ಠಾಣೆಗೆ ಬರುವಂತೆ ನೋಟಿಸ್ ನೀಡಿದ್ದರು. ಅದರಂತೆ ನಾನು ಹಾಗೂ ಚಾಸಾ–9 ರವರು ಠಾಣೆಗೆ ಹೋಗಿದ್ದು, ಅಲ್ಲಿ ಪೊಲೀಸ್ ಸಿಬ್ಬಂದಿಯಾದ ಚಾಸಾ–35 ರವರು ಚಾಸಾ–11 ಜಮಾಲ್ ಸಾಬ್, ಚಾಸಾ–12 ಅಬ್ದುಲ್ ಕರಿಂ ಮತ್ತು ಆರೋಪಿಯ ಭಾವಚಿತ್ರಗಳನ್ನು ಕ್ಯಾಮೆರಾದಿಂದ ತೆಗೆದು, ನಂತರ ಪ್ರಿಂಟ್ ಮಾಡಿಸಿದ ಫೋಟೊಗಳನ್ನು ಬಿಳಿ ಪೇಪರುಗಳಿಗೆ ಅಂಟಿಸಿ, ಅವುಗಳನ್ನು ನಮ್ಮ ಸಮಕ್ಷಮ ಜಪ್ತುಪಡಿಸಿಕೊಂಡು, ಪಂಚನಾಮೆ ಮಾಡಿ, ನಮ್ಮ ಸಹಿಗಳನ್ನು ಪಡೆದುಕೊಂಡರು. ಚಾಸಾ–11 ಮತ್ತು 12 ರವರ ತಲಾ 3 ಫೋಟೊಗಳನ್ನು ಹಾಗೂ ಆರೋಪಿಯ 2 ಫೋಟೋಗಳನ್ನು ಜಪ್ತುಪಡಿಸಿಕೊಂಡಿರುತ್ತಾರೆ. ಆಗ ಸಮಯ ಬೆಳಿಗ್ಗೆ 10.00 ರಿಂದ 11.00 ಗಂಟೆಯಾಗಿರುತ್ತದೆ. ತನಗೆ ನೀಡಿದ ನೋಟಿಸನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ–45 ಎಂದು, ಸಾಕ್ಷಿಯ ಸಹಿಯನ್ನು ನಿಪಿ–45(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–46 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–46(ಎ) ಎಂದು ಗುರುತಿಸಲಾಯಿತು. ಪಂಚನಾಮೆ

ಸಮಯದಲ್ಲಿ ತೆಗೆದ ಫೋಟೊವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-47, 48 ಮತ್ತು 49 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಪಿ.ಪಿ. ರವರು ಮೂರು ಸೀಲಾದ ವಸ್ತುಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲು ಅನುಮತಿ ಕೋರಿದ್ದರು, ಸದ್ರಿ ವಸ್ತುಗಳ ಮೇಲೆ ಇದ್ದ ಸೀಲು ಸುಸ್ಥಿತಿಯಲ್ಲಿ ಇರುವುದರಿಂದ ಪಿ.ಪಿ. ರವರಿಗೆ ಅದನ್ನು ತೆರೆಯಲು ಅನುಮತಿಸಲಾಯಿತು.)**

ಪೊಲೀಸರು ಕ್ಯಾಮೆರಾದಲ್ಲಿ ತೆಗೆದ ಚಾಸಾ-11 ರವರ 3 ಫೋಟೊಗಳಿರುವ ಒಂದು ಪುಟವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-50 ಎಂದು, ಸಾಕ್ಷಿಯ ಸಹಿಯನ್ನು ನಿಪಿ-50(ಎ) ಎಂದು, ಲಕೋಟೆಯನ್ನು ನಿಪಿ-50/1 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-50/1(ಎ) ಎಂದು ಗುರುತಿಸಲಾಯಿತು. ಅದೇ ರೀತಿ, ಚಾಸಾ-12 ರವರ 3 ಫೋಟೊಗಳಿರುವ ಒಂದು ಪುಟವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-51 ಎಂದು, ಸಾಕ್ಷಿಯ ಸಹಿಯನ್ನು ನಿಪಿ-51(ಎ) ಎಂದು, ಲಕೋಟೆಯನ್ನು ನಿಪಿ-51/1 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-51/1(ಎ) ಎಂದು ಗುರುತಿಸಲಾಯಿತು. ಆರೋಪಿಯ 2 ಫೋಟೊಗಳಿರುವ ಒಂದು ಪುಟವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-52 ಎಂದು, ಸಾಕ್ಷಿಯ ಸಹಿಯನ್ನು ನಿಪಿ-52(ಎ) ಎಂದು, ಲಕೋಟೆಯನ್ನು ನಿಪಿ-52/1 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-52/1(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಸಿ.ಎಲ್.ಎ.ಡಿ.ಸಿ. ರವರಿಂದಃ-**

ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

*Sd/-*

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ